III. Sri K.J. George (Minister for Housing and Urban Development) I beg to lay :

1. The Audit Reports of the Following Urban Development Authorities.

(i) Hassan for the year 1987-88 and 1988-89

(ii) Chickmangalore for the year 1988-89 and 1989-90 as required under Section 48 (5) of Karnataka Urban Development Authority Act, 1987.

Mr. Speaker : Papers laid.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ ಒಂದು ಬಹಳ ಮುಖ್ಯವಾದ ವಿಚಾರ ಇದೆ. ರೈತರ ಭೂಮಿಯನ್ನು ಹರಾಜು ಮಾಡುತ್ತಿದ್ದಾರೆ...

ಅಧ್ಯಕ್ಷರು : ಈಗಾಗಲೇ ಮಾನ್ಯ ಕಂದಾಯ ಮಂತ್ರಿಗಳು ಪ್ರಶ್ನೆಗೆ ಉತ್ತರ ಕೊಡತಕ್ಕಂತಹ ಕಾಲದಲ್ಲಿ ಹೇಳಿದ್ದಾರೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಸಹಕಾರಿ ಸಾಲಕ್ಕೆ ಸಂಬಂಧಪಟ್ಟಂತೆ ಹರಾಜು ನಡೆಯುತ್ತಿದೆ.

(ಗೊಂದಲ)

ಶ್ರೀ ಹೆಚ್.ವಿಕಾಂತಯ್ಯ : ಸಹಕಾರಿ ಸಾಲವನ್ನು ವಸೂಲು ಮಾಡಲು ಹರಾಜು ನಡೆಯುತ್ತಿದೆ. ಮಾನ್ಯ ಸಹಕಾರ ಮಂತ್ರಿಗಳು ಉತ್ತರ ಹೇಳತಕ್ಕಂತಹ....

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ನಮ್ಮ ನಮ್ಮ ಕ್ಷೇತ್ರದಲ್ಲಿ ಯಾರ್ಯಾರು 10 ಸಾವಿರ ರೂಪಾಯಿ ಒಳಗೆ ಸಾಲವನ್ನು ತೆಗೆದುಕೊಂಡಿದ್ದಾರೆ ಅವರ ಸಾಲವನ್ನು ಮನ್ನಾ ಮಾಡುತ್ತಾರೆಂದು ಹೇಳಿದ್ದೇವೆ. ಸಾಲ ಹತ್ತು ಸಾವಿರ ರೂಪಾಯಿಗಳ ಒಳಗೆ ಇದ್ದರೂ ಸಹ ಇವತ್ತು ಪಿಕ್ ಅಂಡ್ ಚೂಸ್ ಮಾಡಿಕೊಂಡು ಅವರ ಆಸ್ತಿಗಳನ್ನು ಹರಾಜು ಮಾಡಿ ಸಾಲವನ್ನು ವಸೂಲಿ ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಕೊನೆಯ ಪಕ್ಷ ಅದರ ಬಗ್ಗೆ ನೋಡಿ.

ಶ್ರೀ ಹೆಚ್. ವಿಕಾಂತಯ್ಯ : ಇದರ ಬಗ್ಗೆ ತಾವು ಏನಾದರೂ ಸೂಚನೆ ಕೊಟ್ಟಿದ್ದೀರ.

ಅಧ್ಯಕ್ಷರು : ಅದನ್ನು ತಾವು ಬರೆದು ಕಳುಹಿಸಿ, ಅವರು ನೋಡುತ್ತಾರೆ.

ಶ್ರೀ ಎಂ. ನಾರಾಯಣಸ್ವಾಮಿ : ನಮ್ಮ ತಾಲ್ಲೂಕಿನಲ್ಲಿ ಇವತ್ತು ರೈತರ ಆಸ್ತಿಪಾಸ್ತಿಗಳನ್ನು ಹರಾಜು ಮಾಡುವ ಮೂಲಕ ಸಾಲವನ್ನು ವಸೂಲಿ ಮಾಡುತ್ತಿದ್ದಾರೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಸದನದಲ್ಲಿ ಸರ್ಕಾರ ವಚನ ಕೊಟ್ಟಿದೆ. ಮಾರ್ಚಿ 31 ರವರೆಗೆ ಯಾವುದೇ ಸಾಲವನ್ನು ವಸೂಲಿ ಮಾಡಲು ರೈತರ ಆಸ್ತಿ ಪಾಸ್ತಿಗಳನ್ನು ಹರಾಜು ಮಾಡುವುದಿಲ್ಲವೆನ್ನುವ ಆಶ್ವಾಸನೆಯನ್ನು ಸರ್ಕಾರ ಕೊಟ್ಟಿದೆ. ಅದರಲ್ಲಿ ಆಯ್ಕೆಮಾಡಿಕೊಂಡು ಕೆಲವೇ ರೈತರ ಮನೆಗಳನ್ನು ಜಪ್ತಿ ಮಾಡುವುದು ಸರಿಯೆ? ಸರ್ಕಾರ ಇಂತಹ ಕಾರ್ಯಕ್ರಮ ಹಾಕಿಕೊಂಡಿರುವುದು ಸರಿಯೆ? ಅದಕ್ಕೆ ಅವಕಾಶ ಕೊಡಬಾರದು.

ಶ್ರೀ ಎಂ. ನಾರಾಯಣಸ್ವಾಮಿ : ನಮ್ಮ ತಾಲ್ಲೂಕಿನಲ್ಲಿ ಏನು ಜನರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಬಿಟ್ಟರು, ಬಿಡ್‌ದಾರರು ಯಾರೂ ಮುಂದೆ ಬರಲಿಲ್ಲವೆಂದು ತಹಶೀಲ್ದಾರ್‌ರವರು ಎಂಡಾರ್ಸ್‌ಮೆಂಟ್ ಕೊಟ್ಟಿದ್ದಾರೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೆ, ಎಲ್ಲಿ ಸದಸ್ಯರು ತಿಳಿದುಕೊಂಡಿರುವುದು, ಮಾರ್ಚಿ 31ರವರೆಗೆ ನಾವು ಬಲವಂತದಿಂದ ಸಾಲವನ್ನು ವಸೂಲಿ ಮಾಡುವುದಿಲ್ಲವೆನ್ನುವ ಮಾತು ಹಿಂದಿನ ಸರ್ಕಾರದ ಹೇಳಿಕೆ. ಮೊನ್ನೆ ರೈತಸಂಘದವರು ಮುಖ್ಯ ಮಂತ್ರಿಗಳು ಜೊತೆ ಮಾತುಕತೆ ಮಾಡಿದ ಮೇಲೆ, ಅವರು ಕೊಟ್ಟಂತಹ ಆಶ್ವಾಸನೆ ಏನೆಂದರೆ, ಕೇಂದ್ರಕ್ಕೆ ಸ್ಪಷ್ಟೀಕರಣ ಕೇಳಿ ಪತ್ರ ಬರೆದಿದ್ದೇವೆ, ಅಲ್ಲಿಂದ ಸ್ಪಷ್ಟೀಕರಣ ಬರುವವರಿಗೆ ನಾವು ವಸೂಲಿ ನಿಲುಗಡೆ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ನನಗೆ, ನನ್ನ ಮೂಲಕ ರಾಜ್ಯದ ರೈತರಿಗೆ ಕೊಟ್ಟಿದ್ದಾರೆ. ಈಗ ನಮ್ಮ ಬೇತಮಂಗಲದ ಶಾಸಕರು 10 ಸಾವಿರ ರೂಪಾಯಿ ಒಳಗಡೆ ಸಾಲ ಇರುವವರ ಮನೆಗಳನ್ನು ಜಪ್ತಿ ಮಾಡಿ ಹರಾಜು ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಮುಖ್ಯ ಮಂತ್ರಿಗಳು ಬಂದು ಹೇಳಿಕೆಯನ್ನು ಕೊಟ್ಟರೆ ಒಳ್ಳೆಯದು. ನನಗೆ ಕೊಟ್ಟ ಆಶ್ವಾಸನೆ ನಿಜವೋ ಅಥವಾ ಸುಳ್ಳೋ ಗೊತ್ತಾಗುತ್ತದೆ. ಮುಂದಿನ ಕ್ರಮವನ್ನು ನಾವು ತೀರ್ಮಾನ ಮಾಡಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದೊಂದು ಅತಿ ಜರೂರಾಗಿರತಕ್ಕ ವಿಚಾರ.

ಶ್ರೀ ಸಿ. ಬೈರೇಗೌಡ : ವಿದ್ಯುಚ್ಛಕ್ತಿ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದ್ದರು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದರ ಬಗ್ಗೆ ಮಂತ್ರಿಗಳು ಹೇಳಿಕೆ ಕೊಡುವುದು ಇದ್ದರೆ ಅದು ಮೊದಲು ಆಗಬಹುದು.

+ ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ. ಕೋಲಾರ ಜಿಲ್ಲೆಯ ಕೋಲಾರ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಬಂಗಾರಪೇಟೆ ಮತ್ತ ಇತರ ತಾಲ್ಲೂಕುಗಳ ಗ್ರಾಮಾಂತರ ಪ್ರದೇಶಗಳಿಗೆ ದಿನವಹಿ 15 ಗಂಟೆಗಳ ಕಾಲ ರೈತರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಲಾಗುತ್ತಿದೆ. ಚಿಂತಾಮಣಿ ತಾಲ್ಲೂಕಿನಗೆ 12ನೇ ಮಾರ್ಚ್ 1991 ರಂದು ಬೆಳಿಗ್ಗೆ 10-37 ಗಂಟೆಯಿಂದ ಸಂಜೆ 5-30 ಗಂಟೆವರೆಗೆ ಗೌರಿಬಿದನೂರು ಚಿಂತಾಮಣಿಯ 66 K.VS ಪ್ರಸರಣ ಲೈನ್, ಬೈಲಸಂದ್ರದ ಬಳಿ ಕಡಿದುಹೋಗಿ ಅಲ್ಲಿ ವಿದ್ಯುಚ್ಛಕ್ತಿ ಸರಬರಾಜಿಗೆ ಅಡಚಣೆ ಉಂಟಾಯಿತು. ಕಡಿದು ಹೋದ ಲೈನನ್ನು ದುರಸ್ತಿ ಮಾಡಿ ೧೨ನೇ ಮಾರ್ಚ್ 1991 ರಂದು ಸಂಜೆ 5.30 ಗಂಟೆಗೆ ವಿದ್ಯುಚ್ಛಕ್ತಿ ಮಂಡಳಿಯ ತುಮಕೂರು ವೃತ್ತದ ಅಧೀಕ್ಷಕ ಅಭಿಯಂತರ ವಿದ್ಯುತ್ ಅವರನ್ನು ಮತ್ತು ಚಿಕ್ಕಬಳ್ಳಾಪುರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರನ್ನು ಚಿಂತಾಮಣಿಗೆ ಕಳುಹಿಸಿದ್ದು, ಅವರು ಧರಣಿ ಕುಳಿತಿರುವ ರೈತರನ್ನು ಸಾಂತ್ವನಗೊಳಿಸಲು ಪ್ರಯತ್ನ ಮಾಡುತ್ತಿದ್ದಾರೆ. ಈಗಾಗಲೇ ತಿಳಿಸಿರುವಂತೆ 8ನೇ ಮಾರ್ಚ್ 1991 ರಂದು ಕೋಲಾರದಲ್ಲಿ 2-5 ಎಂ.ವಿ. 66-11 ಕೆ.ವಿ. ಪರಿವರ್ತಕಗಳನ್ನು ಚಾಲನೆ ಮಾಡಲಾಗಿದೆ. ಇದರಿಂದಾಗಿ, ಕೋಲಾರ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನ ಪರಿಸ್ಥಿತಿ ಉತ್ತಮಗೊಂಡಿದೆ.

ಮುಳಬಾಗಿಲಿನ 66 ಕೆ.ವಿ. ಲೈನು ಮುಗಿಯುವ ಹಂತದಲ್ಲಿದ್ದು, ಈ ತಿಂಗಳ ಕೊನೆಯ ವೇಳೆಗೆ ಇದರ ಕಾಮಗಾರಿಗಳು ಪೂರ್ಣಗೊಳ್ಳಲಿವೆ. ವಿಜಯಪುರ 66 ಕೆ.ವಿ. ಲೈನು ಒಂದು ವಾರದಲ್ಲಿ ಮುಗಿಯುತ್ತದೆ. ಈ ಹೊಸ ಲೈನುಗಳನ್ನು ಚಾಲನೆ ಮಾಡುವುದರಿಂದ ಮುಳಬಾಗಿಲು, ವಿಜಯಪುರ, ಶಿಡ್ಲಘಟ್ಟಗಳಲ್ಲಿ ವಿದ್ಯುತ್ ಬಲ ಉತ್ತಮಗೊಳ್ಳುತ್ತದೆ. ಚಿಕ್ಕಬಳ್ಳಾಪುರಕ್ಕೆ ಪೀಣ್ಯದಿಂದ ಹಿಂದಿದ್ದ ಸರಬರಾಜನ್ನು ತಪ್ಪಿಸಿ, ಈಗ ಸುಮಾರು 15 ದಿವಸಗಳಿಂದ ಗೌರಿಬಿದನೂರಿನಿಂದ ವಿದ್ಯುಚ್ಛಕ್ತಿ ಸರಬರಾಜು ಮಾಡುತ್ತಿರುವುದರಿಂದ ಅಲ್ಲೂ ಸಹ, ವಿದ್ಯುತ್ ಬಲವು ಉತ್ತಮಗೊಂಡಿದೆ. ವಿದ್ಯುಚ್ಛಕ್ತಿ